ಓ ಎಸ್ ನಂ. 164/2020

ಪಿ ಡಬ್ಲ್ಯು 1

ದಿನಾಂಕ 02-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 3 ನೇ ಪ್ರತಿವಾದಿ ಪರಃ ಶ್ರೀ ಬಿ ಆರ್ ಹೆಚ್ ವಕೀಲರಿಂದಃ

ನನ್ನ ತಂದೆಯ ತಂದೆ ಹೆಸರು ಬೀರಪ್ಪ ಆಗಿರುತ್ತದೆ. ಸದರಿ ಬೀರಪ್ಪರವರಿಗೆ ಎಷುಟ ಜನ ಮಕ್ಕಳು ಎಂದರೆ ಸಾಕ್ಷಿ ೬ ಎಂದು ನುಡಿಯುತ್ತಾರೆ. ಅವರೆಂದರೆ 1. ನನ್ನ ತಂದೆ ಕಲ್ಲೇಶಪ್ಪ 2. ಮಾರಗಟಪ್ಪ 3. ಬೀರಪ್ಪ 4. ಕಲ್ಲಿನಿಂಗಪ್ಪ 5. ನಾಗರಾಜಪ್ಪ ಮತ್ತು 6. ಬಸವರಾಜಪ್ಪ. ಅವರ ಪೈಕಿ ನನ್ನ ತಂದೆ ಕಲ್ಲೇಶಪ್ಪರವರೇ ಹಿರಿಯರು ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಪಿ-10 ರ ಸರ್ವೆ ನಂ.143/2 ರ ಸ್ವತ್ತು ಅನ್ಯಕ್ರಾಂತವಾಗಿದೆ ಎಂದರೆ ಸರಿ. ಸದರಿ ಸ್ವತ್ತು ಅನ್ಯಕ್ರಾಂತವಾಗಿ ನನ್ನ ಚಿಕ್ಕಪ್ಪಂದಿರು ಸ್ವಾಧೀನದಲ್ಲಿದ್ದಾರೆ ನನ್ನ ತಂದೆ ಸ್ವಾಧೀನದಲ್ಲಿ ಇಲ್ಲ, ಪಹಣಿ ಮಾತ್ರ ನನ್ನ ತಂದೆ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನ್ಯಾಯವಾಗಿ ನನಗೆ ಏನು ಸಲ್ಲಬೇಕು ಅದನ್ನು ಕೊಟ್ಟರೇ ಸಾಕು ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಪಿ-11 ರಲ್ಲಿ ಕಂಡು ಬರುವ ಆಸ್ತಿಯನ್ನು ನನ್ನ ತಂದೆ ಚಂದ್ರಶೇಖರ್ ರವರ ಹೆಸರಿಗೆ ವಿಲ್ ನಾಮೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ

ಯಾವುದೇ ವಿಲ್ ಮಾಡಿಲ್ಲ ಎಂದು ನುಡಿಯುತ್ತಾರೆ. ನಿಪಿ-10 ಮತ್ತು 11 ರಲ್ಲಿ ಕಾಣಿಸಿರುವಂತಹ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಆದಾಯದಿಂದಲೇ ನನ್ನ ತಂದೆ ಸದರಿ ಆಸ್ತಿಗಳನ್ನು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.